ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: www.kptcl.karnataka.gov.in
ಮಿಂಚಂಚೆ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್) : ಯು40109ಕೆಎ1999ಎಸ್‌ಜಿ025521**
**(ಕಂಪನಿಯ ಅಧಿಕೃತ ಕಛೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009)**

**ಪ್ರಸ್ತಾವನೆ:**

ವೈಯಕ್ತಿಕ ಅಪಘಾತ ವಿಮೆ ಯೋಜನೆ (ಗುಂಪು)/PERSONAL ACCIDENT POLICY (GROUP) ಯನ್ನು ಅನುಷ್ಠಾನಗೊಳಸುವ ಸಂಬಂಧ, ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಸದರಿ ಪ್ರಕ್ರಿಯೆಯು ಪೂರ್ಣಗೊಳ್ಳಲು ಸುಮಾರು ಎರಡರಿಂದ ಮೂರು ತಿಂಗಳ ಅವಧಿಯ ಅವಶ್ಯಕತೆ ಇರುವುದರಿಂದ, ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ವೈಯಕ್ತಿಕ ಅಪಘಾತ ವಿಮೆ ಯೋಜನೆಯನ್ನು ಅಲ್ಪಾವಧಿಗೆ ಮುಂದುವರೆಸುವಂತೆ ಕವಿಪ್ರನಿ ನೌಕರರ ಸಂಘವು ಕೋರಿರುತ್ತದೆ. ಸದರಿ ಕೋರಿಕೆಯನ್ವಯ ಮೆ. ದಿ ಓರಿಯಂಟಲ್ ಇನ್ಶುರೆನ್ಸ್ ಕಂಪನಿ ಲಿಮಿಟೆಡ್‌ಗೆ ನಾಲ್ಕು ತಿಂಗಳ ಅವಧಿಗೆ ವಿಮೆ ಕಂತನ್ನು ದಿನಾಂಕ: 28-11-2022 ರಂದು ಮುಂಗಡವಾಗಿ ಪಾವತಿಸಲಾಗಿದೆ. ಮುಂಗಡವಾಗಿ ನಿಗಮದ ವತಿಯಿಂದ ಪಾವತಿಸಿರುವ ವಿಮಾ ಕಂತನ್ನು ನಿಗಮದ ಅಧಿಕಾರಿ ಮತ್ತು ನೌಕರರ ವೇತನದಲ್ಲಿ ಕಡಿತಗೊಳಸುವ ಸಂಬಂಧ ಈ ಆದೇಶ ಹೊರಡಿಸಲಾಗಿದೆ.

**ಆದೇಶ ಸಂಖ್ಯೆ: ಕವಿಪ್ರನಿನಿ/ಔಬಾ/ಬಿ14/10116/2020-21/ ಬೆಂಗಳೂರು ದಿನಾಂಕ:** 6 DEC 2022

ನಿಗಮದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ನೌಕರರಿಗೆ **ವೈಯಕ್ತಿಕ ಅಪಘಾತ ವಿಮೆ ಯೋಜನೆ (ಗುಂಪು)/PERSONAL ACCIDENT POLICY(GROUP)** ಯನ್ನು ಮೆ॥ ದಿ ಓರಿಯಂಟಲ್ ಇನ್ಶುರೆನ್ಸ್ ಕಂಪನಿ ಲಿಮಿಟೆಡ್ ರವರಿಂದ ದಿನಾಂಕ: 28.11.2022 ರಿಂದ ದಿನಾಂಕ: 27.03.2023 ರವರೆಗೆ ನಾಲ್ಕು ತಿಂಗಳ ಅವಧಿಗೆ ವಿಮೆಯನ್ನು ಪಡೆಯಲಾಗಿದ್ದು, ವಿಮೆ ಕಂತಿನ ಮೊತ್ತವನ್ನು ನೌಕರರ ಪರವಾಗಿ ಈಗಾಗಲೇ ವಿಮೆ ಸಂಸ್ಥೆಗೆ ಪಾವತಿಸಲಾಗಿದ್ದು, ಸದರಿ ವಿಮೆ ಕಂತಿನ ಮೊತ್ತ ರೂ. 615.00 (ಆರು ನೂರ ಹದಿನೈದು ರೂಪಾಯಿಗಳು ಮಾತ್ರ) ಪ್ರತಿ ಅಧಿಕಾರಿ ಮತ್ತು ನೌಕರರಿಂದ ಡಿಸೆಂಬರ್-2022 ರ ಮಾಹೆಯ ವೇತನದಲ್ಲಿ ಸಂಬಂಧಿಸಿದ ವೇತನ ಬಟವಾಡೆ ಅಧಿಕಾರಿಗಳು ಮುರಿಕೆ ಮಾಡಿ, ನಿಗಮಕ್ಕೆ ಪಾವತಿಸಲು ಅನುಮೋದನೆ ನೀಡಲಾಗಿದೆ.

ಅಪಘಾತದಿಂದ ಮರಣ ಅಥವಾ ಅಶಕ್ತತೆ ಉಂಟಾದಲ್ಲಿ ನೌಕರರ ಅವಲಂಬಿತರಿಗೆ ಪಾವತಿಸಲಾಗುವ ಪರಿಹಾರ, ನೌಕರರಿಂದ ಕಡಿತಗೊಳಸಲಾಗುವ ವಿಮೆ ಮೊತ್ತವನ್ನು ನಿಗಮ ಕಾರ್ಯಾಲಯಕ್ಕೆ ಕ್ರೋಢೀಕರಿಸಿ ಪಾವತಿಸುವ ವಿಧಾನ ಹಾಗೂ ಇನ್ನಿತರೇ ಸಂಬಂಧಿಸಿದ ವಿಷಯಗಳಗೆ ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಔಬಾ/ಬಿ14/10116/2020-21, ದಿನಾಂಕ: 22.09.2021 ರಲ್ಲಿ ತಿಳಸಿರುವ ವಿವರಣೆ/ ನಿಯಮ/ಷರತ್ತುಗಳು ಯಥಾವತ್ತಾಗಿ ಮುಂದುವರಿಯಲಿದೆ. (ಮಾಹಿತಿಗಾಗಿ ಸದರಿ ಆದೇಶದ ಪ್ರತಿಯನ್ನು ಈ ಆದೇಶದೊಂದಿಗೆ ಲಗತ್ತಿಸಿದೆ.)

**ನಿರ್ದೇಶಕರು (ಆಡಳತ ಮತ್ತು ಮಾ.ಸಂ)**
**ಕವಿಪ್ರನಿನಿ.**

**ಪ್ರತಿಯನ್ನು:**

1. ವ್ಯವಸ್ಥಾಪಕ ನಿರ್ದೇಶಕರು, ಪಿ.ಸಿ.ಕೆ.ಎಲ್, ಕಾವೇರಿ ಭವನ, ಬೆಂಗಳೂರು.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

3. ಎಲ್ಲಾ ವಲಯ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ.
4. ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ಪ್ರಸರಣ)/(ಹಣಕಾಸು)/(ಆ ಮತ್ತು ಮಾ.ಸಂ).

**ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ** www.kptcl.karnataka.gov.in **ಅಂತರ್ಜಾಲದಲ್ಲಿ ಪ್ರಕಟಿಸಲಾಗಿದೆ.**

1. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ)/ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
2. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು/ ಲೆಕ್ಕಾಧಿಕಾರಿಗಳು ಕವಿಪ್ರನಿನಿ.
3. ವ್ಯವಸ್ಥಾಪಕರು(ಆಂ.ನಿ)/(ನಗದು ಮತ್ತು ಲೆಕ್ಕಗಳು), ಕವಿಪ್ರನಿನಿ, ಕಾವೇರಿ ಭವನ,ಬೆಂಗಳೂರು.

**ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:-**

1. ಶ್ರೀ ಆರ್. ಹೆಚ್. ಲಕ್ಷ್ಮಿಪತಿ, ಅಧ್ಯಕ್ಷರು ಕವಿಪ್ರನಿನಿ ನೌಕರರ ಸಂಘ (ನೋಂದಣಿ ಸಂಖ್ಯೆ:659), ಬೆಂಗಳೂರು ಮತ್ತು ನಿರ್ದೇಶಕರು ಕವಿಪ್ರನಿನಿ ಮತ್ತು ಎಲ್ಲಾ ಎಸ್ಕಾಂಗಳು.
2. ಶ್ರೀ ಕೆ. ಶಿವಣ್ಣ, ಅಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು ಮತ್ತು ನಿರ್ದೇಶಕರು ಕವಿಪ್ರನಿನಿ ಮತ್ತು ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ(ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮಾ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಧಿಕಾರಿಗಳ ಸಂಘ, ಬೆಂಗಳೂರು.

ದೂರವಾಣಿ ಸಂಖ್ಯೆ: 080–22212343
ಫ್ಯಾಕ್ಸ್ ಸಂಖ್ಯೆ: 080–22278803
ಅಂತರ್ಜಾಲ: www.kptcl.karnataka.gov.in
ಮಿಂಚಂಚೆ ವಿಳಾಸ: director.ahr.kptcl@gmail.com

193

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್) : ಯು40109ಕೆಎ1999ಎಸ್‌ಜಿ025521**

**(ಕಂಪನಿಯ ಅಧಿಕೃತ ಕಛೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009)**

**ಪ್ರಸ್ತಾವನೆ:**

1. ಕವಿಪ್ರನಿನಿ ಯು ಕರ್ನಾಟಕದಾದ್ಯಂತ ವಿದ್ಯುತ್ ಪ್ರಸರಣೆಯ ಕೆಲಸವನ್ನು ನಿರ್ವಹಿಸುತ್ತಿದೆ. ನಿಗಮದಲ್ಲಿ ಸುಮಾರು ೯೦೫೦ ಖಾಯಂ ಅಧಿಕಾರಿ/ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ. ವಿದ್ಯುತ್ ವಿತರಣೆಯ ನಿರ್ವಹಣೆ ಕಾರ್ಯಕ್ಕೆ ಹೆಚ್ಚು ತಾಂತ್ರಿಕ ಪ್ರಾವೀಣ್ಯತೆ ಹಾಗೂ ಹೆಚ್ಚು ಸುರಕ್ಷತ ಮುಂಜಾಗ್ರತೆಯ ಕ್ರಮಗಳು ಅವಶ್ಯಕವಾಗಿರುತ್ತದೆ. ಈ ರೀತಿಯ ವಿದ್ಯುತ್ ವಿತರಣ ಜಾಲಗಳನ್ನು ನಿರ್ವಹಿಸುವಾಗ ಯಾವುದೇ ಅನಿರೀಕ್ಷಿತವಾಗಿ ಅಪಘಾತಗಳು ಸಂಭವಿಸಿದಾಗ ನಿಗಮದ ಅಧಿಕಾರಿ/ನೌಕರರಿಗೆ ಅಂಗವೈಕಲ್ಯತೆ ಅಥವಾ ಸಾವು ಉಂಟಾದರೆ, ಅವರ ಅವಲಂಬಿತರಿಗೆ ಆರ್ಥಿಕ ಪರಿಹಾರ ನೀಡುವ ಸಂಬಂಧ **ವೈಯಕ್ತಿಕ ಅಪಘಾತ ವಿಮೆ ಯೋಜನೆ(ಗುಂಪು)** ಅನ್ನು ನಿಗಮವು ಅನುಷ್ಟಾನಗೊಳಸಲು ಉದ್ದೇಶಿಸಿರುತ್ತದೆ. ಈ ಯೋಜನೆ ಮೂಲಕ ಅಪಘಾತದಿಂದ ಅಂಗವೈಕಲ್ಯತೆ ಅಥವಾ ಸಾವು ಉಂಟಾದರೆ, ಅವರ ಅವಲಂಬಿತರಿಗೆ ಆರ್ಥಿಕ ಪರಿಹಾರ ನೀಡುವುದರಿಂದ ಸದರಿಯವರ ಜೀವನ ನಿರ್ವಹಣೆಗೆ ಆರ್ಥಿಕ ನೆರವು ನೀಡಿದಂತಾಗುತ್ತದೆ.
2. ಕವಿಪ್ರನಿನಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿ/ನೌಕರರಿಗೆ ಅಪಘಾತದಿಂದ ಅಂಗವೈಕಲ್ಯತೆ ಅಥವಾ ಸಾವು ಸಂಭವಿಸಿದಾಗ, ಅವರ ಅವಲಂಬಿತರಿಗೆ **ವೈಯಕ್ತಿಕ ಅಪಘಾತ ವಿಮೆ ಯೋಜನೆ(ಗುಂಪು)** ಯನ್ನು ಅನುಷ್ಟಾನಗೊಳಿಸುವ ಮೂಲಕ ಆರ್ಥಿಕ ಪರಿಹಾರವನ್ನು ನೀಡುವಂತೆ ಕವಿಪ್ರನಿ ನೌಕರರ ಸಂಘ ಹಾಗೂ ಅಧಿಕಾರಗಳ ಒಕ್ಕೂಟವು ನಿಗಮವನ್ನು ಕೋರಿರುತ್ತಾರೆ.
3. ಈ ಸಂಬಂಧವಾಗಿ ಮುಖ್ಯ ಇಂಜಿನಿಯರ್(ವಿ),ಟಿ & ಪಿ ಶಾಖೆ, ಕಾವೇರಿ ಭವನ, ಬೆಂಗಳೂರು ರವರ ವಿಸ್ತೃತ ಕಾರ್ಯಾದೇಶ ಸಂಖ್ಯೆ: CEE (T&P)/SEE/EE (P)/AEEP-4/2021-22/4873-77/ದಿನಾಂಕ: 04-08-2021 ರಲ್ಲಿ ತಿಳಿಸಿರುವಂತೆ, ದಿನಾಂಕ:21–9–2021 ರಂದು ವಾರ್ಷಿಕ ವಿಮೆ ಕಂತನ್ನು ಮುಂಗಡವಾಗಿ ಪಾವತಿಸಿದ್ದು, ಕವಿಪ್ರನಿನಿಯ ಅಧಿಕಾರಿ/ನೌಕರರಿಗೆ ದಿನಾಂಕ:22–9–2021 ರಿಂದ 21–9–2022 ರವರೆಗಿನ ವಿಮೆ ಅವಧಿಯೊಳಗೆ ಯಾವುದೇ ಅಪಘಾತದಿಂದ ಮರಣ/ಅಶಕ್ತತೆ ಉಂಟಾದಲ್ಲಿ **ವೈಯಕ್ತಿಕ ಅಪಘಾತ ವಿಮೆ ಯೋಜನೆ(ಗುಂಪು)/ PERSONAL ACCIDENT POLICY(GROUP)** ಅಡಿಯಲ್ಲಿ ವಿಮೆ ಸೌಲಭ್ಯವನ್ನು ಒದಗಿಸಲು ಮೆ. ದಿ ಓರಿಯಂಟಲ್ ಇನ್ಸುರೆನ್ಸ್ ಕಂಪನಿ ಲಿಮಿಟೆಡ್ ರವರೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ.
4. ಸದರಿ ವಿಸ್ತೃತ ಕಾರ್ಯಾದೇಶ ಹಾಗೂ ಒಪ್ಪಂದನ್ವಯ, ವಿಮಾ ಅವಧಿಯೊಳಗೆ ಕವಿಪ್ರನಿನಿಯ ಅಧಿಕಾರಿ/ನೌಕರರಿಗೆ ಯಾವುದೇ ಅಪಘಾತದಿಂದ ಮರಣ/ಅಶಕ್ತತೆ ಉಂಟಾದರೆ ೬೦ ತಿಂಗಳ ಒಟ್ಟು ವೇತನವನ್ನು (ಕನಿಷ್ಟ ರೂ.೨೫ ಲಕ್ಷಗಳು ಮತ್ತು ಗರಿಷ್ಟ ರೂ ೫೦ ಲಕ್ಷಗಳ ಮಿತಿಗೊಳಪಟ್ಟು) ಮೆ. ದಿ ಓರಿಯಂಟಲ್ ಇನ್ಸುರೆನ್ಸ್ ಕಂಪನಿ ಲಿಮಿಟೆಡ್ ವತಿಯಿಂದ ಪಾವತಿ ಮಾಡಲಾಗುವುದು.
5. ಸದರಿ **ವೈಯಕ್ತಿಕ ಅಪಘಾತ ವಿಮೆ ಯೋಜನೆ(ಗುಂಪು)/PERSONAL ACCIDENT POLICY(GROUP)** ಯನ್ನು ಅನುಷ್ಟಾನಗೊಳಿಸುವ ಸಂಬಂಧ ನಿಗಮದಿಂದ ಈ ಆದೇಶ ಹೊರಡಿಸಲಾಗಿದೆ.

**ಆದೇಶ ಸಂಖ್ಯೆ: ಕವಿಪ್ರನಿನಿ/ಔಬಾ/ಬಿ14/10116/2020–21/ ಬೆಂಗಳೂರು ದಿನಾಂಕ: 22 SEP 2021**

ಕವಿಪ್ರನಿನಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರಿಗೆ **ವೈಯಕ್ತಿಕ ಅಪಘಾತ ವಿಮೆ ಯೋಜನೆ (ಗುಂಪು)/PERSONAL ACCIDENT POLICY(GROUP)** ಅಡಿಯಲ್ಲಿ ದಿನಾಂಕ: 22–9–2021 ರಿಂದ 21–9–2022 ರವರೆಗಿನ ವಿಮಾ ಅವಧಿಯೊಳಗೆ ಯಾವುದೇ ಅಪಘಾತದಿಂದ ಮರಣ ಅಥವಾ ಅಶಕ್ತತೆ ಉಂಟಾದಲ್ಲಿ ಮೆ. ದಿ ಓರಿಯಂಟಲ್ ಇನ್ಸುರೆನ್ಸ್ ಕಂಪನಿ ಲಿಮಿಟೆಡ್ ವತಿಯಿಂದ, ಅಧಿಕಾರಿ/ನೌಕರರ ಅವಲಂಬಿತರಿಗೆ ಪರಿಹಾರ ಮೊತ್ತವನ್ನು ಪಾವತಿಸಲು ಈ ಕೆಳಕಂಡ ನಿಯಮ/ಷರತ್ತುಗಳಿಗೆ ಒಳಪಟ್ಟು ನಿಗಮದ ಅನುಮೋದನೆ ನೀಡಲಾಗಿದೆ:–

1. ಕವಿಪ್ರನಿನಿಯ ಆಡಳಿತ ವ್ಯಾಪ್ತಿಯ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರತಿ ನೌಕರರು/ಅಧಿಕಾರಿಗಳಿಗೆ (೯೦೫೦ ಸಂಖ್ಯೆ) ವಾರ್ಷಿಕ ವಿಮಾ ಕಂತು ರೂ.೬೪೯/– ಗಳಂತೆ ಕವಿಪ್ರನಿನಿಯಿಂದ ಮೆ// ದಿ ಓರಿಯಂಟಲ್ ಇನ್ಸುರೆನ್ಸ್ ಕಂಪನಿ ಲಿಮಿಟೆಡ್ ಇವರಿಗೆ ಒಟ್ಟು ಮೊತ್ತ ರೂ.೫೮,೭೩,೪೫೦/– ಗಳನ್ನು (ಐವತ್ತೆಂಟು ಲಕ್ಷದ ಎಪ್ಪತ್ತಮೂರು ಸಾವಿರದ ನಾಲ್ಕು ನೂರ ಐವತ್ತು ಮಾತ್ರ) ದಿ: 21–9–2021 ರಂದು ಮುಂಗಡವಾಗಿ ಪಾವತಿ ಮಾಡಲಾಗಿದೆ.

2. ಕವಿಪ್ರನಿನಿಯ ಅಧಿಕಾರಿ/ನೌಕರರಿಗೆ ದಿನಾಂಕ: 22-9-2021 ರಿಂದ 21-9-2022 ರವರೆಗಿನ ವಿಮೆ ಅವಧಿಯಲ್ಲಿ ಯಾವುದೇ ಅಪಘಾತದಿಂದ ಮರಣ ಅಥವಾ ಅಶಕ್ತತೆ ಉಂಟಾದಲ್ಲಿ ಅಧಿಕಾರಿ/ನೌಕರನ ಅವಲಂಬಿತರಿಗೆ ಮೆ. ದಿ ಓರಿಯಂಟಲ್ ಇನ್ಶುರೆನ್ಸ್ ಕಂಪನಿ ಲಿಮಿಟೆಡ್ ವತಿಯಿಂದ ಈ ಕೆಳಕಂಡಂತೆ ಪರಿಹಾರ ಪಾವತಿ ಮಾಡಲಾಗುವುದು.

| SL No | Particulars | Insurance Coverage |
|---|---|---|
| 1 | Death Only | Rs.50,00,000/- Or 60 Months gross salary income of the employee whichever is lower, subject to minimum of Rs.25,00,000/- |
| 2 | Loss of two limbs or two eyes or one limb and one eye | Rs.25,00,000/- |
| 3 | Loss of one limb or one eye | Rs 12,50,000/- |
| 4 | Permanent Total disability(PTD) from Injuries other than those named above | Rs. 25,00,000/- |
| 5 | Permanent Partial Disability | Percentage of benefits as per annexure-A (As per Schedule-1 of Employee Compensation Act,1923) |
| 6 | Temporarily total Disability | Rs. 10,000/- per week up to 104 weeks. |

3. ಕವಿಪ್ರನಿನಿ ಪರವಾಗಿ ಮುಖ್ಯ ಇಂಜಿನಿಯರ್(ವಿ), ಟಿ & ಪಿ ಶಾಖೆ, ಕಾವೇರಿ ಭವನ, ಬೆಂಗಳೂರು ರವರು ಮೆ. ದಿ ಓರಿಯಂಟಲ್ ಇನ್ಶುರೆನ್ಸ್ ಕಂಪನಿ ಲಿಮಿಟೆಡ್ ನೊಂದಿಗೆ 12.07.2021 ರಂದು ಒಡಂಬಡಿಕೆ ಮಾಡಿಕೊಂಡಿರುತ್ತಾರೆ.
4. **ವಾರ್ಷಿಕ ವಿಮಾ ಕಂತಿನ ಮೊತ್ತ ರೂ.649/- (ರೂ. ಆರು ನೂರ ನಲವತ್ತೊಂಬತ್ತು ಮಾತ್ರ) ಗಳನ್ನು ಕವಿಪ್ರನಿನಿಯ ಪ್ರತಿ ಅಧಿಕಾರಿ/ನೌಕರರ ಸೆಪ್ಟಂಬರ್-2021 ರ ಮಾಹೆಯ ವೇತನದಲ್ಲಿ ಸಂಬಂಧಿಸಿದ ವೇತನ ಬಟವಾಡೆ ಅಧಿಕಾರಿಗಳು ಬಡ್ಡಾಯವಾಗಿ ಮುರಿಕೆ ಮಾಡುವುದು.**
5. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯಗಳು, ಕವಿಪ್ರನಿನಿ ರವರುಗಳು ತಮ್ಮ ವಲಯ ವ್ಯಾಪ್ತಿಯ ಕಡಿತಗೊಳಿಸಿರುವ ಮೊತ್ತಕ್ಕೆ ನೌಕರರು/ಅಧಿಕಾರಿಗಳ ವಿವರಗಳೊಂದಿಗೆ ಕ್ರೋಢೀಕರಿಸಿ, ಎ.ಟಿ (Advise of Transfer) ಮೂಲಕ ವ್ಯವಸ್ಥಾಪಕರು(ಆಂ.ನಿ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು (ಸ್ಥಳ ಸಂಕೇತ-701) ರವರಿಗೆ ಅಂಗೀಕಾರಕ್ಕಾಗಿ ಕಳುಹಿಸಲು ಕ್ರಮವಹಿಸುವುದು. ಪ್ರಸರಣ ವಲಯಗಳನ್ನು ಹೊರತು ಪಡಿಸಿ ಇತರೆ ಕಚೇರಿಗಳೂ ಅಂದರೆ ಎಸ್.ಎಲ್.ಡಿ.ಸಿ, ಪಿ.ಸಿ.ಕೆ.ಎಲ್, ನಗದು & ಲೆಕ್ಕಗಳು ಶಾಖೆ/ಆಂತರಿಕ ನಿರ್ವಹಣೆ ಶಾಖೆ, ಕವಿಪ್ರನಿನಿ, ಕಾವೇರಿ ಭವನ ಸಹ ಇದೇ ಕ್ರಮವನ್ನು ಪಾಲಿಸತಕ್ಕದ್ದು.
6. ಎಲ್ಲಾ ಮುಖ್ಯ ಇಂಜಿಸಿಯರ್(ವಿ), ಪ್ರಸರಣ ವಲಯ ರವರುಗಳು ಈ ಆದೇಶದೊಂದಿಗೆ ಲಗತ್ತಿಸಿರುವ **'ಅನುಬಂಧ-1'** ರಲ್ಲಿನ ವಿವರಗಳನ್ನು 'ಎಕ್ಸೆಲ್' ತಂತ್ರಾಂಶದಲ್ಲಿ ಭರ್ತಿ ಮಾಡಿ, ಮೆದು ಪ್ರತಿಯನ್ನು (Soft copy) 'managerir@yahoo.com' ಇಮೇಲ್ ವಿಳಾಸಕ್ಕೆ ಕಳುಹಿಸುವುದು ಹಾಗೂ ಕಚೇರಿ ಮುಖ್ಯಸ್ಥರ ಮೊಹರಿನೊಂದಿಗೆ ಸಹಿ ಮಾಡಿರುವ 'Hard copy' ಯನ್ನು ಎ.ಟಿ ಪ್ರತಿಯೊಂದಿಗೆ "ವ್ಯವಸ್ಥಾಪಕರು, ಔದ್ಯಮಿಕ ಬಾಂಧವ್ಯ ಶಾಖೆ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು" ರವರಿಗೆ ದಿನಾಂಕ: 15.10.2021 ರ ಒಳಗಾಗಿ ತಲುಪಿಸುವುದು.
7. ಕವಿಪ್ರನಿನಿಯಿಂದ ವರ್ಗಾವಣೆ/ನಿವೃತ್ತಿಯಾದ ಅಧಿಕಾರಿ/ನೌಕರರು ಕವಿಪ್ರನಿನಿಯಲ್ಲಿ ಕರ್ತವ್ಯದಿಂದ ಬಿಡುಗಡೆಗೊಂಡ ದಿನಾಂಕದಿಂದ ವಿಮೆ ಸೌಲಭ್ಯಕ್ಕೆ ಒಳಪಡುವುದಿಲ್ಲ. ವಲಯವಾರು ನೇಮಕಾತಿ/ವರ್ಗಾವಣೆಯಿಂದ ಹೊಸದಾಗಿ ಸೇರ್ಪಡೆಯಾಗುವ ಅಧಿಕಾರಿ/ನೌಕರರನ್ನು ವಿಮೆಗೆ ಒಳಪಡಿಸಲು, ಸಂಬಂಧಪಟ್ಟ ವೇತನ ಬಟವಾಡೆ ಅಧಿಕಾರಿಗಳು prorata ಆಧಾರದ ಮೇಲೆ (ದಿನಾಂಕ: 22-9-2021 ರ ನಂತರ ನಿಗಮಕ್ಕೆ ವರ್ಗಾವಣೆ/ಸೇರ್ಪಡೆಗೊಂಡ ದಿನದಿಂದ ದಿನಾಂಕ: 21-9-2022 ರವರೆಗೆ) ವಿಮೆ ಕಂತನ್ನು ಕಡಿತಗೊಳಿಸಿ, ಕಡಿತಗೊಳಿಸಿರುವ ಮೊತ್ತವನ್ನು ವಿವರಗಳೊಂದಿಗೆ ಎ.ಟಿ (Advise of Transfer) ಮೂಲಕ ವ್ಯವಸ್ಥಾಪಕರು(ಆಂ.ನಿ), ಕವಿಪ್ರನಿನಿ,

ಕಾವೇರಿ ಭವನ, ಬೆಂಗಳೂರು (ಸ್ಥಳ ಸಂಕೇತ-701) ರವರಿಗೆ ಅಂಗೀಕಾರಕ್ಕಾಗಿ ಕಳುಹಿಸುವುದು. ಲಗತ್ತಿಸಿರುವ **'ಅನುಬಂಧ-1'** ದಲ್ಲಿ ಸದರಿ ವಿವರಗಳನ್ನು ಪ್ರತಿ ತಿಂಗಳು 15 ನೇ ತಾರೀಖಿನ ಒಳಗಾಗಿ ವ್ಯವಸ್ಥಾಪಕರು, ಔದ್ಯಮಿಕ ಬಾಂಧವ್ಯ ಶಾಖೆ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು ರವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸತಕ್ಕದ್ದು.

8. ಕವಿಪ್ರನಿನಿಯ ಅಧೀನ ಕಚೇರಿಗಳು ತಮ್ಮ ಆಡಳಿತ ವ್ಯಾಪ್ತಿಯಲ್ಲಿನ ಸಿಬ್ಬಂದಿಯು ಅಪಘಾತದಿಂದ ನಿಧನ ಅಥವಾ ಅಶಕ್ತತೆ ಹೊಂದಿದಲ್ಲಿ, ಕೂಡಲೇ renuka.k@orientalinsurance.co.in/ devikamohan@orientalinsurance.co.in/ jayanthip@orientalinsurance.co.in/ managerir@yahoo.com ಇ-ಮೇಲ್ ವಿಳಾಸಕ್ಕೆ ವಿವರಗಳನ್ನು ಕಳುಹಿಸುವುದು ಹಾಗೂ **"ಸೀನಿಯರ್ ಡಿವಿಷನ್ ಮ್ಯಾನೇಜರ್, ದಿ ಓರಿಯಂಟಲ್ ಇನ್ಸುರೆನ್ಸ್ ಕಂಪನಿ ಲಿಮಿಟೆಡ್, ಆಯೊ ಶಾಪ್ಪಿಂಗ್ ಕಾಂಪ್ಲೆಕ್ಸ್, 3 ನೇ ಮಹಡಿ, 44/45, ರೆಸಿಡೆನ್ಸಿ ರೋಡ್ ಕ್ರಾಸ್, ಬೆಂಗಳೂರು-560025"** ರವರಿಗೆ ನೇರವಾಗಿ ಮಾಹಿತಿ ನೀಡಿ, ನಂತರ 30 ದಿನಗಳೊಳಗಾಗಿ ಲಗತ್ತಿಸಿರುವ ಕ್ಲೈಮ್ ಫಾರಂನೊಂದಿಗೆ **(ಅನುಬಂಧ-2)** ಎಲ್ಲಾ ದಾಖಲಾತಿಗಳನ್ನು ದೃಢೀಕರಿಸಿ, ವಿಮಾ ಪರಿಹಾರಕ್ಕಾಗಿ ಪ್ರಸ್ತಾವನೆಯನ್ನು **ಔದ್ಯಮಿಕ ಬಾಂದವ್ಯ ಶಾಖೆ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು** ಇಲ್ಲಿಗೆ ಸಲ್ಲಿಸುವುದು. ಈ ಸಂಬಂಧ ವಿಮಾ ಪರಿಹಾರಕ್ಕಾಗಿ ಅಗತ್ಯವಿರುವ ಮಾಹಿತಿಯನ್ನು ಮತ್ತು ದಾಖಲಾತಿಗಳನ್ನು ವಿಮಾ ಕಂಪನಿಗೆ ಹಾಗೂ ಔದ್ಯಮಿಕ ಬಾಂದವ್ಯ ಶಾಖೆ, ಕಾವೇರಿ ಭವನ ಇಲ್ಲಿಗೆ ವಿಳಂಬ ಮಾಡದೆ ಕಳುಹಿಸುವ ಹೊಣೆಗಾರಿಕೆಯು ಸಂಬಂಧಪಟ್ಟ ವಲಯ/ವೃತ್ತ/ವಿಭಾಗ ಕಚೇರಿಗಳ ಮುಖ್ಯಸ್ಥರದ್ದಾಗಿರುತ್ತದೆ.

9. **'ಅನುಬಂಧ-3'** ರಲ್ಲಿ ಮೆ.ದಿ ಓರಿಯಂಟಲ್ ಇನ್ಸುರೆನ್ಸ್ ಕಂಪನಿ ಲಿಮಿಟೆಡ್ ವತಿಯಿಂದ ನೀಡಿರುವ ಮಾಹಿತಿ ಪತ್ರದಲ್ಲಿ ನಮೂದಿಸಿರುವ ವಿಳಾಸ/ಫೋನ್ ನಂಬರ್/ಇ-ಮೇಲ್ ಐಡಿ ಗಳನ್ನು ಕ್ಲೈಮ್ ಇತ್ಯರ್ಥ ಹಾಗೂ ಇತರೆ ಗೊಂದಲಗಳ ಸಂದರ್ಭದಲ್ಲಿ ಸಂಪರ್ಕಿಸುವುದು. ಮುಖ್ಯ ಇಂಜಿನಿಯರ್(ವಿ),ಟಿ & ಪಿ ಶಾಖೆ, ಕಾವೇರಿ ಭವನ, ಬೆಂಗಳೂರು ರವರು ಹೊರಡಿಸಿರುವ ವಿಸ್ತೃತ ಕಾರ್ಯಾದೇಶದ ಪ್ರತಿಯನ್ನು ಹೆಚ್ಚಿನ ಮಾಹಿತಿಗಾಗಿ ಲಗತ್ತಿಸಿದೆ.**(ಅನುಬಂಧ-4)**

10. ಸದರಿ ಯೋಜನೆಯ ಕಾರ್ಯಭಾರವನ್ನು ವ್ಯವಸ್ಥಾಪಕರು, ಔದ್ಯಮಿಕ ಬಾಂಧವ್ಯ ಶಾಖೆ, ಕವಿಪ್ರನಿನಿ, ನಿಗಮ ಕಚೇರಿ, ಕಾವೇರಿ ಭವನ, ಬೆಂಗಳೂರು ಇವರು ನಿರ್ವಹಣೆ ಮಾಡುವುದು ಹಾಗೂ ಪರಿಹಾರ ಮೊತ್ತವನ್ನು ತ್ವರಿತವಾಗಿ ಪಾವತಿಗೆ ಅಗತ್ಯ ನೆರವು ನೀಡುವುದು.

**ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರಿಂದ ಅನುಮೋದಿಸಲ್ಪಟ್ಟಿದೆ**

**ನಿರ್ದೇಶಕರು (ಆಡಳಿತ ಮತ್ತು ಮಾ.ಸಂ)**
**ಕವಿಪ್ರನಿನಿ.**

**ಪ್ರತಿಯನ್ನು:**

1. ವ್ಯವಸ್ಥಾಪಕ ನಿರ್ದೇಶಕರು, ಪಿ.ಸಿ.ಕೆ.ಎಲ್, ಕಾವೇರಿ ಭವನ,ಬೆಂಗಳೂರು.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ, ಕಾವೇರಿ ಭವನ,ಬೆಂಗಳೂರು.
3. ಎಲ್ಲಾ ವಲಯ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ.
4. ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಪ್ರಸರಣ)/ (ಹಣಕಾಸು)/(ಆ ಮತ್ತು ಮಾ.ಸಂ).

**ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ** www.kptcl.karnataka.gov.in **ಅಂತರ್ಜಾಲದಲ್ಲಿ ಪ್ರಕಟಿಸಲಾಗಿದೆ.**

1. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ)/ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
2. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು/ ಲೆಕ್ಕಾಧಿಕಾರಿಗಳು ಕವಿಪ್ರನಿನಿ.
3. ವ್ಯವಸ್ಥಾಪಕರು(ಆಂ.ನಿ)/(ನಗದು ಮತ್ತು ಲೆಕ್ಕಗಳು), ಕವಿಪ್ರನಿನಿ, ಕಾವೇರಿ ಭವನ,ಬೆಂಗಳೂರು.

**ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:-**

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು ಕವಿಪ್ರನಿನಿ ನೌಕರರ ಸಂಘ (ನೋಂದಣಿ ಸಂಖ್ಯೆ:659), ಬೆಂಗಳೂರು ಮತ್ತು ನಿರ್ದೇಶಕರು ಕವಿಪ್ರನಿನಿ ಮತ್ತು ಎಲ್ಲಾ ಎಸ್ಕಾಂಗಳು.
2. ಶ್ರೀ.ಟಿ.ಎಂ.ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು ಮತ್ತು ನಿರ್ದೇಶಕರು ಕವಿಪ್ರನಿನಿ ಮತ್ತು ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ(ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮಾ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಧಿಕಾರಿಗಳ ಸಂಘ, ಬೆಂಗಳೂರು.